**All India Radio: Bangalore**
**National Bulletin In Kannada**
**08.10.2025 7.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*************

ಮುಖ್ಯಾಂಶಗಳು

೧. ೯ನೇ ಇಂಡಿಯಾ ಮೊಬೈಲ್ ಕಾಂಗ್ರೆಸ್ ಸಮಾವೇಶಕ್ಕೆ ನವದೆಹಲಿಯಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ

೨. ಇಂದಿನಿಂದ ಎರಡು ದಿನಗಳ ಮಹಾರಾಷ್ಟ್ರ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ; ನವಿ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟನೆ

೩. ೨೦೨೬ರ ಆರ್ಥಿಕ ವರ್ಷಕ್ಕೆ ಭಾರತದ ಅಂದಾಜು ಬೆಳವಣಿಗೆ ದರವನ್ನು ೬.೫ಕ್ಕೆ ಏರಿಸಿದ ವಿಶ್ವಬ್ಯಾಂಕ್

೪. ಐಸಿಸಿ ೨೦೨೫ರ ಸೆಪ್ಟೆಂಬರ್ ತಿಂಗಳ ಆಟಗಾರ ಪ್ರಶಸ್ತಿ; ಭಾರತದ ಅಭಿಷೇಕ್ ಶರ್ಮಾ, ಕುಲದೀಪ್ ಯಾದವ್ ನಾಮನಿರ್ದೇಶನ

*************

ಏಷ್ಯಾದ ಅತಿದೊಡ್ಡ ದೂರಸಂಪರ್ಕ, ಮಾಧ್ಯಮ ಮತ್ತು ತಂತ್ರಜ್ಞಾನ ಸಮಾವೇಶವಾದ ಇಂಡಿಯಾ ಮೊಬೈಲ್ ಕಾಂಗ್ರೆಸ್ ೨೦೨೫ರ ೯ನೇ ಆವೃತ್ತಿಯನ್ನು ಪ್ರಧಾನಿ ನರೇಂದ್ರ ಮೋದಿ, ನವದೆಹಲಿಯಲ್ಲಿ ಇಂದು ಉದ್ಘಾಟಿಸಲಿದ್ದಾರೆ. ನಾಲ್ಕು ದಿನಗಳ ಈ ಕಾರ್ಯಕ್ರಮ ದೂರಸಂಪರ್ಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿನ ಇತ್ತೀಚಿನ ಪ್ರಗತಿಯನ್ನು ಪ್ರದರ್ಶಿಸುವ ಜೊತೆಗೆ ಜಾಗತಿಕ ನಾಯಕರು, ನೀತಿ ನಿರೂಪಕರು, ಉದ್ಯಮ ತಜ್ಞರು ಮತ್ತು ನಾವೀನ್ಯತಾಕಾರರನ್ನು ಒಂದೇ ವೇದಿಕೆಯಡಿ ಒಟ್ಟುಗೂಡಿಸುತ್ತದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ. ೧೫೦ಕ್ಕೂ ಹೆಚ್ಚು ರಾಷ್ಟ್ರಗಳ ಹಾಗೂ ೪೦೦ಕ್ಕೂ ಅಧಿಕ ಕಂಪನಿಗಳಿಂದ ೧ ಲಕ್ಷದ ೫೦ ಸಾವಿರಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಜಪಾನ್, ಕೆನಡಾ, ಬ್ರಿಟನ್, ರಷ್ಯಾ, ಐರ್ಲ್ಯಾಂಡ್ ಮತ್ತು ಆಸ್ಟ್ರೀಯಾದ ನಿಯೋಗಗಳು ಸಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿವೆ. ಆಪ್ಟಿಕಲ್ ಸಂವಹನ, ದೂರಸಂಪರ್ಕದಲ್ಲಿ ಸೆಮಿಕಂಡಕ್ಟರ್‌ಗಳು, ಕ್ವಾಂಟಮ್ ಸಂವಹನ ಮತ್ತು ೬-ಜಿ ತಂತ್ರಜ್ಞಾನ ಈ ಸಮಾವೇಶದ ಪ್ರಮುಖ ವಿಷಯಗಳಾಗಿವೆ. ’ಪರಿವರ್ತನೆಗಾಗಿ ನಾವೀನ್ಯತೆ’ ಎಂಬುದು ಈ ಕಾರ್ಯಕ್ರಮದ ಧ್ಯೇಯವಾಕ್ಯವಾಗಿದೆ.

*************

ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಎರಡು ದಿನಗಳ ಕಾಲ ಮಹಾರಾಷ್ಟ್ರಕ್ಕೆ ಭೇಟಿ ನೀಡಲಿದ್ದಾರೆ. ಈ ಸಮಯದಲ್ಲಿ ಅವರು, ೧೯ ಸಾವಿರದ ೬೫೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ನವಿ ಮುಂಬೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸಲಿದ್ದಾರೆ. ಈ ವಿಮಾನ ನಿಲ್ದಾಣವನ್ನು ವಾರ್ಷಿಕವಾಗಿ ೯೦ ದಶಲಕ್ಷ ಪ್ರಯಾಣಿಕರನ್ನು ಹಾಗೂ ಮೂರು ದಶಲಕ್ಷ ಮೆಟ್ರಿಕ್‌ಟನ್ ಸರಕು ನಿರ್ವಹಿಸುವ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಲಾಗಿದೆ. ಭೇಟಿಯ ಭಾಗವಾಗಿ ಪ್ರಧಾನಿ ಮುಂಬೈ ಮೆಟ್ರೋ ೩ನೇ ಮಾರ್ಗದ ೨ಬಿ ಹಂತವನ್ನು ಉದ್ಘಾಟಿಸಲಿದ್ದು, ೩೭ ಸಾವಿರದ ೨೭೦ ಕೋಟಿ ರೂಪಾಯಿ ಒಟ್ಟು ವೆಚ್ಚದಲ್ಲಿ ನಿರ್ಮಿಸಲಾಗಿರುವ ಒಟ್ಟಾರೆ ಮುಂಬೈ ಮೆಟ್ರೋ ೩ನೇ ಮಾರ್ಗವನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದರ ಜೊತೆಗೆ ೧೧ ಸರ್ಕಾರಿ ಸಾರಿಗೆ ನಿರ್ವಹಕರಿಗಾಗಿ ದೇಶದ ಮೊದಲ ಸಂಯೋಜಿತ ಸಾಮಾನ್ಯ ಸಂಚಾರ ಆಪ್ ಮುಂಬೈ-ಒನ್ ಅನ್ನು ಕೂಡ ಬಿಡುಗಡೆ ಮಾಡಲಿದ್ದಾರೆ ಹಾಗೂ ಸೀಮಿತ ಅವಧಿಯ ಉದ್ಯೋಗಾರ್ಹತಾ ಯೋಜನೆಗೂ ಚಾಲನೆ ನೀಡಲಿದ್ದಾರೆ. ನಾಳೆ, ಪ್ರಧಾನಿ ನರೇಂದ್ರ ಮೋದಿ, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರಿಗೆ ಮುಂಬೈನಲ್ಲಿ ಆತಿಥ್ಯ ನೀಡಲಿದ್ದಾರೆ. ಈ ವೇಳೆ ಉಭಯ ನಾಯಕರು 'ವಿಷನ್-೨೦೩೫'ರ ವಿವಿಧ ಅಂಶಗಳಾದ್ಯಂತ ಭಾರತ-ಬ್ರಿಟನ್ ಸಮಗ್ರ ಕಾರ್ಯತಂತ್ರ ಪಾಲುದಾರಿಕೆಯ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯ ಪರಿಶೀಲನೆ ನಡೆಸಲಿದ್ದಾರೆ. ಪ್ರಧಾನಿ ಮೋದಿ ಮತ್ತು ಪ್ರಧಾನಿ ಸ್ಟಾರ್ಮರ್ ಮುಂಬೈನಲ್ಲಿ ನಡೆಯಲಿರುವ ೬ ನೇ ಜಾಗತಿಕ ಫಿನ್‌ಟೆಕ್ ಉತ್ಸವದಲ್ಲಿ ಭಾಗವಹಿಸಲಿದ್ದಾರೆ. ಇಂದಿನಿಂದ ಎರಡು ದಿನಗಳ ಭಾರತ ಭೇಟಿ ಕೈಗೊಳ್ಳುತ್ತಿರುವ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರ ಮೊದಲ ಅಧಿಕೃತ ಭಾರತ ಭೇಟಿ ಇದಾಗಿರಲಿದೆ. ಈ ಭೇಟಿಯು ಭಾರತ ಮತ್ತು ಬ್ರಿಟನ್‌ನ ಭವಿಷ್ಯದ ಪಾಲುದಾರಿಕೆಯನ್ನು ನಿರ್ಮಿಸುವ ಹಂಚಿಕೆಯ ದೃಷ್ಟಿಕೋನವನ್ನು ಪುನರುಚ್ಚರಿಸಲು ಅವಕಾಶವನ್ನು ಒದಗಿಸುತ್ತದೆ.

*************

೨೦೨೬ರ ಆರ್ಥಿಕ ವರ್ಷಕ್ಕೆ ಭಾರತದ ಅಂದಾಜು ಬೆಳವಣಿಗೆ ದರವನ್ನು ವಿಶ್ವಬ್ಯಾಂಕ್ ೬.೫ಕ್ಕೆ ಏರಿಸಿದೆ. ಜಿಎಸ್‌ಟಿ ಯಲ್ಲಿನ ಮಹತ್ವದ ಸುಧಾರಣೆಯಿಂದಾದ ಸಕಾರಾತ್ಮಕ ಪರಿಣಾಮ, ಸಧೃಢ ಸ್ಥಳೀಯ ಬೇಡಿಕೆಯನ್ನು ಆಧರಿಸಿ ಜೂನ್ ನಲ್ಲಿ ನೀಡಿದ್ದ ೬.೩ ಅಂದಾಜು ಬೆಳವಣಿಗೆ ದರವನ್ನು ಪರಿಷ್ಕರಿಸಿದೆ. ಇತ್ತೀಚಿನ ದಕ್ಷಿಣ ಏಷ್ಯಾದಲ್ಲಿನ ಬೆಳವಣಿಗೆ ಕುರಿತ ವರದಿಯಲ್ಲಿ ವಿಶ್ವಬ್ಯಾಂಕ್ ಭಾರತದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರೆಯಲಿದೆ ಎಂದು ತಿಳಿಸಿದೆ.

************

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ, ಕೇಂದ್ರ ಸರ್ಕಾರ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ನೀಡುತ್ತಿದೆ ಎಂಬ ಸುದ್ದಿ, ಸತ್ಯಕ್ಕೆ ದೂರವಾಗಿದೆ ಎಂದು ಪಿಐಬಿ ಸತ್ಯಶೋಧನಾ ಘಟಕ ಸ್ಪಷ್ಟಪಡಿಸಿದೆ.

ಸಾಮಾಜಿಕ ಮಾಧ್ಯಮದಲ್ಲಿ ಈ ಕುರಿತು ದೃಢಪಡಿಸಿರುವ ಪಿಐಬಿ, ಸಾರ್ವಜನಿಕರು ಯಾವುದೇ ಅನುಮಾನಸ್ಪದ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡುವಾಗ ಜಾಗ್ರತೆ ವಹಿಸುವಂತೆ ಹಾಗೂ ಸುಳ್ಳು ಸಂದೇಶಗಳು ಮತ್ತು ಮಾಹಿತಿಗಳ ಕುರಿತಂತೆ ಎಚ್ಚರದಿಂದಿದ್ದು, ಯಾವುದೇ ಮಾಹಿತಿಯ ಸತ್ಯಾಸತ್ಯತೆಯನ್ನು ಅಧಿಕೃತ ಮೂಲಗಳ ಮೂಲಕ ಖಾತರಿಪಡಿಸಿಕೊಳ್ಳುವಂತೆ ಸಲಹೆ ನೀಡಿದೆ.

*************

ಇಂದು ದೇಶಾದ್ಯಂತ ವಾಯುಪಡೆ ದಿನವನ್ನು ಆಚರಿಸಲಾಗುತ್ತಿದೆ. ೧೯೩೨ರ ಈ ದಿನ ದೇಶದ ಹೆಮ್ಮೆಯ ಭಾರತೀಯ ವಾಯುಪಡೆ ಸ್ಥಾಪನೆಗೊಂಡ ಸ್ಮರಣಾರ್ಥ ಈ ದಿನವನ್ನು ವಾಯುಪಡೆ ದಿನವಾಗಿ ಆಚರಿಸಲಾಗುತ್ತದೆ. ೯೩ನೇ ವಾಯುಸೇನಾ ದಿನದ ಮುನ್ನಾದಿನವಾದ ನಿನ್ನೆ ಮಾತನಾಡಿರುವ ಏರ್‌ಚೀಫ್ ಮಾರ್ಷಲ್ ಅಮರ್‌ಪ್ರೀತ್‌ಸಿಂಗ್, ಇಂದಿನ ಅನಿಶ್ಚಿತ ಜಾಗತಿಕ ಬೆಳವಣಿಗೆಗಳ ನಡುವೆ ವಾಯುಸೇನೆ ಮಹತ್ವ ಪಡೆದುಕೊಂಡಿದೆ. ಭಾರತೀಯ ವಾಯುಸೇನೆ ಇಂದಿನ ಜಾಗತಿಕ ಸವಾಲುಗಳಿಗೆ ಪ್ರತಿಕ್ರಿಯಿಸಲು ಸನ್ನದ್ಧವಾಗಿದೆ. ಆಪರೇಷನ್ ಸಿಂದೂರ್ ಈ ವರ್ಷದ ವಾಯುಸೇನಾ ದಿನದ ಕೇಂದ್ರ ವಿಷಯವಾಗಿರಲಿದೆ ಎಂದರು. ಇದೇ ವೇಳೆ ಅವರು, ರಾಷ್ಟ್ರ ರಕ್ಷಣೆಗೆ ಕಟಿಬದ್ಧರಾಗಿರುವ ಯೋಧರ ತ್ಯಾಗ, ಬಲಿದಾನ, ಸಮರ್ಪಣಾ ಮನೋಭಾವವನ್ನು ಸ್ಮರಿಸಿದರು.

ಧ್ವನಿ : ಏರ್‌ಚೀಫ್ ಮಾರ್ಷಲ್ ಅಮರ್‌ಪ್ರೀತ್‌ಸಿಂಗ್ ( 19 ಸೆಕೆಂಡುಗಳು)

*************

೨೪ ಸಾವಿರದ ೬೩೪ ಕೋಟಿ ರೂಪಾಯಿಗಳ ೪ ರೈಲ್ವೆ ಯೋಜನೆಗಳಿಗೆ ಆರ್ಥಿಕ ವ್ಯವಹಾರ ಕುರಿತ ಕೇಂದ್ರ ಸಚಿವ ಸಂಪುಟ ಸಮಿತಿ ಅನುಮೋದನೆ ನೀಡಿದೆ. ಈ ನಾಲ್ಕು ಮಲ್ಟಿಟ್ರ್ಯಾಕ್ ಯೋಜನೆಗಳು ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್ ಮತ್ತು ಛತ್ತೀಸ್‌ಗಢದ ೧೮ ಜಿಲ್ಲೆಗಳನ್ನು ವ್ಯಾಪಿಸಲಿದ್ದು, ಪ್ರಸ್ತುತ ಇರುವ ಭಾರತೀಯ ರೈಲ್ವೆಯ ಜಾಲವನ್ನು ಸುಮಾರು ೮೯೪ ಕಿಲೋಮೀಟರ್‌ಗಳಷ್ಟು ವಿಸ್ತರಿಸಲಿದೆ. ನವದೆಹಲಿಯಲ್ಲಿ ನಿನ್ನೆ ನಡೆದ ಕೇಂದ್ರ ಸಚಿವ ಸಂಪುಟ ಸಮಿತಿ ಸಭೆಯ ನಂತರ, ಸಭೆಯಲ್ಲಿ ಕೈಗೊಂಡ ನಿರ್ಧಾರಗಳ ಕುರಿತು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

*************

ಹತ್ತಿ ಮತ್ತು ಜವಳಿ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಮುಂಬರುವ ಋತುವಿಗೆ ಹತ್ತಿಯ ಕನಿಷ್ಠ ಬೆಂಬಲ ಬೆಲೆಯನ್ನು ಸರ್ಕಾರ ಶೇಕಡಾ ೮ಕ್ಕೆ ಹೆಚ್ಚಿಸಿದೆ ಎಂದು ಕೇಂದ್ರ ಜವಳಿ ಖಾತೆ ರಾಜ್ಯ ಸಚಿವ ಪಬಿತ್ರ ಮಾರ್ಗರಿಟಾ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ವಿಶ್ವ ಹತ್ತಿ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಅವರು, ಹತ್ತಿ ದೇಶದ ಜವಳಿ ಉದ್ಯಮದ ಬೆನ್ನೆಲುಬಾಗಿದೆ. ಭಾರತವು ಹತ್ತಿಯ ಅತಿದೊಡ್ಡ ಉತ್ಪಾದಕ ದೇಶವಾಗಿದ್ದು, ಸುಮಾರು ಶೇಕಡಾ ೪೦ ರಷ್ಟು ಪ್ರದೇಶವನ್ನು ಒಳಗೊಂಡಿದೆ ಎಂದು ಮಾಹಿತಿ ನೀಡಿದರು.

ಭಾರತೀಯ ವಿಜ್ಞಾನಿಗಳು ಹೆಚ್ಚಿನ ಇಳುವರಿ ನೀಡುವ, ಹವಾಮಾನ-ನಿರೋಧಕ ಮತ್ತು ಜೈವಿಕ ಬಲವರ್ಧಿತ ಬೀಜ ಪ್ರಭೇದಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ, ಇದು ಸವಾಲಿನ ಪರಿಸ್ಥಿತಿಗಳಲ್ಲಿ ಬಲವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಚಿವರು ಹೇಳಿದರು.

*************

ಭಾರತ-ಬ್ರೆಜಿಲ್ ವ್ಯಾಪಾರ ಮೇಲ್ವಿಚಾರಣಾ ಕಾರ್ಯವಿಧಾನ - ಟಿಎಂಎಂನ ೭ ನೇ ಸಭೆ ನಿನ್ನೆ ನವದೆಹಲಿಯಲ್ಲಿ ನಡೆಯಿತು. ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಮತ್ತು ಬ್ರೆಜಿಲ್‌ನ ವಿದೇಶಾಂಗ ವ್ಯಾಪಾರ ಕಾರ್ಯದರ್ಶಿ ಟಟಿಯಾನಾ ಲ್ಯಾಸೆರ್ಡಾ ಪ್ರಜೆರೆಸ್, ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆಯನ್ನು ಹೆಚ್ಚಿಸುವ, ಭಾರತ-ಮೆರ್ಕೋಸರ್ ಆದ್ಯತಾ ವ್ಯಾಪಾರ ಒಪ್ಪಂದ ವಿಸ್ತರಿಸುವ ಮತ್ತು ಔಷಧಗಳು, ರಾಸಾಯನಿಕಗಳು, ಎಂಎಸ್‌ಎಂಇಗಳು ಹಾಗೂ ಹಣಕಾಸು ಮುಂತಾದ ಕ್ಷೇತ್ರಗಳಲ್ಲಿ ಸಹಯೋಗವನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಚರ್ಚಿಸಿದರು. ಸಭೆಯ ಫಲಿತಾಂಶವನ್ನು ಬ್ರೆಜಿಲ್ ಉಪಾಧ್ಯಕ್ಷರು ಭಾರತದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಮುಂದಿನ ವಾರ ಭಾರತಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಪರಿಶೀಲಿಸಲಿದ್ದಾರೆ.

*************

ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ-ಐಸಿಸಿ ಸೆಪ್ಟೆಂಬರ್ ೨೦೨೫ರ ತಿಂಗಳ ಆಟಗಾರ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಪಟ್ಟಿಯನ್ನು ಪ್ರಕಟಿಸಿದೆ. ಪುರುಷರ ವಿಭಾಗದಲ್ಲಿ, ಭಾರತದಿಂದ ಅಭಿಷೇಕ್ ಶರ್ಮಾ ಮತ್ತು ಕುಲದೀಪ್ ಯಾದವ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ, ಜಿಂಬಾವೆಯ ಬ್ರಿಯಾನ್ ಬೆನೆಟ್ ಮೂರನೇ ನಾಮನಿರ್ದೇಶಿತ ಆಟಗಾರರಾಗಿದ್ದಾರೆ. ಭಾರತ ಟ್ರೋಫಿ ಗೆದ್ದ ಈ ಬಾರಿಯ ಏಷ್ಯಾ ಕಪ್‌ನಲ್ಲಿ, ಏಳು ಟಿ-೨೦ ಪಂದ್ಯಗಳಲ್ಲಿ ೩ ಅರ್ಧಶತಕಗಳು ಸೇರಿದಂತೆ ೩೧೪ ರನ್ ಗಳಿಸಿದ ಅಭಿಷೇಕ್ ಶರ್ಮಾ ಅವರನ್ನು ಪಂದ್ಯಾವಳಿಯ ಶ್ರೇಷ್ಠ ಆಟಗಾರ ಎಂದು ಹೆಸರಿಸಲಾಯಿತು. ಮತ್ತೊಂದೆಡೆ, ಕುಲ್ದೀಪ್ ಯಾದವ್ ೧೭ ವಿಕೆಟ್‌ಗಳೊಂದಿಗೆ ಏಷ್ಯಾ ಕಪ್‌ನಲ್ಲಿ ಪ್ರಮುಖ ವಿಕೆಟ್ ಪಡೆದ ಬೌಲರ್ ಆಗಿ ಹೊರಹೊಮ್ಮಿದರು.

ಮಹಿಳಾ ವಿಭಾಗದಲ್ಲಿ, ಭಾರತ, ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾದ ಮೂವರು ಉನ್ನತ ದರ್ಜೆಯ ಬ್ಯಾಟರ್‌ಗಳನ್ನು ಈ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ. ಭಾರತದಿಂದ, ಸ್ಮೃತಿ ಮಂಧಾನ ಅವರು ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಸರಣಿಯಲ್ಲಿ ಭಾರತ ಸೋಲನುಭವಿಸಿದ ಹೊರತಾಗಿಯೂ, ಸರಣಿಯ ಶ್ರೇಷ್ಠ ಆಟಗಾರ್ತಿಯಾಗಿದ್ದರು. ಇವರ ಜೊತೆಗೆ ಪಾಕಿಸ್ತಾನದಿಂದ ಸಿದ್ರಾ ಅಮೀನ್ ಮತ್ತು ದಕ್ಷಿಣ ಆಫ್ರಿಕಾದಿಂದ ತಜ್ಮಿನ್ ಬ್ರಿಟ್ಸ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ. ಅಧಿಕೃತ ಜಾಲತಾಣ [www.icc-cricket.com](http://www.icc-cricket.com) ನಲ್ಲಿ ಮತದಾನದ ನಂತರ ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ.

*************